**2010–11ನೇ ಸಾಲಿನ ವಿವಿಧ ಯೋಜನೆಗಳಲ್ಲಿ ಇರುವ ಕಾಮಗಾರಿಗಳ ವರದಿ**

**(ಉಜಿರೆ ಜಿ.ಪಂ.)**

| ಕ್ರ. ಸಂ. | ಕಾಮಗಾರಿಯ ಹೆಸರು | ಬಿಡುಗಡೆಯಾದ ಅನುದಾನ |
|---|---|---|
| 1 | ಗ್ರಾಮೀಣ ನೀರು ಸರಬರಾಜು ಯೋಜನೆ 2010–11 | |
| 2 | ಸುವರ್ಣ ಗ್ರಾಮ 3ನೇ ಭಾಗ | |
| 3 | 2010–11ನೇ ಸಾಲಿನ 13ನೇ ಹಣಕಾಸು ಆಯೋಗ | |
| 4 | 2010–11ನೇ ಸಾಲಿನ 5054– ರಸ್ತೆ ಮತ್ತು ಸೇತುವೆ | |

**ತಾಲ್ಲೂಕು ಮಟ್ಟದ ಸಮನ್ವಯ ಸಮಿತಿ ಪುನರ್ ರಚನೆ**

**555 (235) ಶ್ರೀ ವಸಂತ ಬಂಗೇರ ಕೆ. (ಬೆಳ್ತಂಗಡಿ) :** ಮಾನ್ಯ ಉನ್ನತ ಶಿಕ್ಷಣ, ಯೋಜನೆ ಮತ್ತು ಸಾಂಖ್ಯಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಿನಾಂಕ: 13.08.2010 ರ ಸರ್ಕಾರಿ ಆದೇಶದಂತೆ ನಾಗರೀಕ ನೋಂದಣಿ ಪದ್ಧತಿಯಡಿ ತಾಲ್ಲೂಕು ಮಟ್ಟದ ಸಮನ್ವಯ ಸಮಿತಿಯನ್ನು ರಾಜ್ಯದ ಎಷ್ಟು ತಾಲ್ಲೂಕುಗಳಲ್ಲಿ ಪುನರ್ ರಚಿಸಲಾಗಿದೆ;

ಆ) ತಾಲ್ಲೂಕು ಮಟ್ಟದ ಸಮನ್ವಯ ಸಮಿತಿಯ ಸಭೆಯನ್ನು ಪ್ರತಿ ತಿಂಗಳು ನಡೆಸಲಾಗುತ್ತಿದೆಯೇ;

ಇ) ಬೆಳ್ತಂಗಡಿ ತಾಲ್ಲೂಕಿನಲ್ಲಿ ಸದ್ರಿ ಸಮಿತಿಯನ್ನು ರಚಿಸಲಾಗಿದೆಯೇ; ಹಾಗಿದ್ದಲ್ಲಿ, ಈವರೆಗೆ ಎಷ್ಟು ಸಭೆಗಳು ಜರುಗಿದ್ದು, ಎಷ್ಟು ಪ್ರಕರಣಗಳನ್ನು ಇತ್ಯರ್ಥಗೊಳಿಸಲಾಗಿದೆ?

**ಡಾ॥ ವಿ.ಎಸ್. ಆಚಾರ್ಯ (ಉನ್ನತ ಶಿಕ್ಷಣ, ಯೋಜನೆ ಮತ್ತು ಸಾಂಖ್ಯಿಕ ಸಚಿವರು) :**

ಅ) ನಾಗರೀಕ ನೋಂದಣಿ ಪದ್ಧತಿಯಡಿ ತಾಲ್ಲೂಕು ಮಟ್ಟದ ಸಮನ್ವಯ ಸಮಿತಿಯನ್ನು ಈ ಹಿಂದೆ ಸರ್ಕಾರದ ಆದೇಶ ಸಂಖ್ಯೆ: ಪಿಡಿಎಸ್

179 ಎಸ್‌ಎಂಸಿ 1997 ದಿನಾಂಕ: 08.01.1998 ರಲ್ಲಿ ರಚಿಸಲಾಗಿತ್ತು. ಸದರಿ ಸಮಿತಿಯು ಇನ್ನೂ ಹೆಚ್ಚಿನ ರೀತಿಯಲ್ಲಿ ಪರಿಣಾಮಕಾರಿಯಾಗಿ ಕೆಲಸ ಮಾಡಲು ಅನುಕೂಲವಾಗುವ ದೃಷ್ಟಿಯಿಂದ ತಾಲ್ಲೂಕು ಮಟ್ಟದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಉನ್ನತ ಮಟ್ಟದ ಪೊಲೀಸ್ ಅಧಿಕಾರಿಯನ್ನು ಕೂಡ ಈ ಸಮಿತಿಗೆ ಒಬ್ಬ ಸದಸ್ಯರನ್ನಾಗಿ ನೇಮಕ ಮಾಡಬೇಕೆಂಬ ಉದ್ದೇಶದಿಂದ ಸದರಿ ಸಮನ್ವಯ ಸಮಿತಿಯನ್ನು ದಿನಾಂಕ: 13.08.2010 ರ ಆದೇಶದ ಮುಖಾಂತರ ಪುನರ್ ರಚಿಸಲಾಗಿದೆ. ಈ ಆದೇಶವು ರಾಜ್ಯದ ಎಲ್ಲಾ ತಾಲ್ಲೂಕುಗಳಿಗೆ ಅನ್ವಯವಾಗುತ್ತದೆ.

ಆ) ಸದರಿ ದಿನಾಂಕ: 13.08.2010 ರ ಸರ್ಕಾರಿ ಆದೇಶದಂತೆ ಈ ಸಮನ್ವಯ ಸಮಿತಿಯ ಸಭೆಯನ್ನು ಪ್ರತಿ ತಿಂಗಳಿಗೊಮ್ಮೆ ನಡೆಸಬೇಕಾಗಿರುತ್ತದೆ. ಆದರೆ, ಹೆಚ್ಚಿನ ತಾಲ್ಲೂಕುಗಳಲ್ಲಿ ತಹಶೀಲ್ದಾರರ ಅಧ್ಯಕ್ಷತೆಯಲ್ಲಿ ನಡೆಯುವ ಕಂದಾಯ ಅಧಿಕಾರಿಗಳ ಮಾಸಿಕ ಸಭೆಗಳಲ್ಲಿ ಜನನ ಮರಣ ನೋಂದಣಿಯ ವಿಷಯವನ್ನು ಕೂಡ ವಿಸ್ತೃತವಾಗಿ ಚರ್ಚಿಸಲಾಗುತ್ತಿದೆ.

ದಿನಾಂಕ: 13.08.2010ರ ಆದೇಶವು ರಾಜ್ಯದ ಎಲ್ಲಾ ತಾಲ್ಲೂಕುಗಳಿಗೆ ಅನ್ವಯವಾಗುವುದರಿಂದ, ಬೆಳ್ತಂಗಡಿ ತಾಲ್ಲೂಕಿಗೆ ಪ್ರತ್ಯೇಕ ಸಮಿತಿಯನ್ನು ರಚಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಪ್ರತಿ ತಿಂಗಳು ಕಂದಾಯ ಅಧಿಕಾರಿಗಳ ಸಭೆಯಲ್ಲಿ ಜನನ ಮರಣ ನೋಂದಣಿ ಬಗ್ಗೆ ಚರ್ಚೆಯಾಗುವುದರಿಂದ, 2010 ನೇ ಸಾಲಿಗೆ ಒಟ್ಟು 12 ಸಭೆಗಳನ್ನು ನಡೆಸಿದಂತಾಗುತ್ತದೆ.

ಸಮನ್ವಯ ಸಮಿತಿಯು ಜನನ ಮರಣ ನೋಂದಣಿಯ ಪ್ರಗತಿಯನ್ನು ಮಾತ್ರ ಪರಿಶೀಲಿಸುವುದರಿಂದ, ಸದರಿ ಸಭೆಯಲ್ಲಿ ಇಲ್ಲಿಯ ವರೆವಿಗೆ ಯಾವುದೇ ಪ್ರಕರಣಗಳು ಚರ್ಚೆಗೆ ಬಂದಿರುವುದಿಲ್ಲ. ಜಿಲ್ಲಾ ಮಟ್ಟದ ಹಾಗೂ ತಾಲ್ಲೂಕು ಮಟ್ಟದ ಸಮನ್ವಯ ಸಮಿತಿಗಳ ಸಭೆಗಳನ್ನು ತಪ್ಪದೇ ನಿಯಮಿತವಾಗಿ ನಡೆಸಲು ಕ್ರಮ ಕೈಗೊಳ್ಳುವಂತೆ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದಿಂದ ಎಲ್ಲಾ ಜಿಲ್ಲಾಧಿಕಾರಿಗಳನ್ನು ಈಗಾಗಲೇ ಕೋರಲಾಗಿದೆ. ಅದಾಗ್ಯೂ, ಸದರಿ ಸಭೆಗಳನ್ನು ತಪ್ಪದೆ ನಿಯಮಿತವಾಗಿ ನಡೆಸಲು ಕ್ರಮ ಕೈಗೊಳ್ಳುವಂತೆ ಸರ್ಕಾರದಿಂದಲ್ಲೂ ಮತ್ತೊಮ್ಮೆ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಮತ್ತು ತಾಲ್ಲೂಕು ತಹಶೀಲ್ದಾರರಿಗೆ ಸೂಚನೆ ನೀಡಲಾಗುವುದು.